



# ಮುಟ್ಟಿದರೆ ಮಸಿ!

**ಹೆಸರಿನಲ್ಲೇ ಮಸಿಯನ್ನು ಹೊಂದಿರುವ 'ಮಸಿವಾಳ' ಮರದ ಕಾಂಡ ಮಸಿಯ ಭಂಡಾರ. ಗುಡ್ಡಗಳ ಇಳಿಜಾರಿನಲ್ಲಿ ಹೆಚ್ಚು ಬೆಳೆಯುವ ಇವುಗಳ ತೊಗಟೆ ಮೃದುವಾಗಿದ್ದರೂ, ಕಾಂಡ ಗಟ್ಟಿಯಾಗಿರುತ್ತದೆ.**

**■ ಜಿ. ನಾಗೇಂದ್ರ ಕಾವೂರು**

ಪ್ರಕೃತಿಯಲ್ಲಿರುವ ಕೆಲವು ಮರಗಳು ತಮ್ಮ ವಿಭಿನ್ನ ಗುಣಲಕ್ಷಣಗಳಿಂದ ಗಮನಸೆಳೆಯುತ್ತವೆ. ಕೆಲವು ಮರಗಳು ಎತ್ತರದಿಂದ, ಕೆಲವು ಮರಗಳು ಅಗಾಧ ಗಾತ್ರದಿಂದ ಅಚ್ಚರಿ ಹುಟ್ಟಿಸುತ್ತವೆ. ಮುಳ್ಳುಗಳಿಂದ ಕೂಡಿರುವ ಕಾಂಡವನ್ನು ಹಾಗೂ ತೊಗಟೆ ಕೆತ್ತಿದರೆ ಹಾಲು ಸ್ರವಿಸುವ ಮರಗಳೂ ಇವೆ. 'ಮಸಿವಾಳ' ಮರದ್ದು ಬೇರೆಯದ್ದೇ ವಿಶೇಷ. ಅದು ಹೆಸರಿಗೆ ತಕ್ಕಂತೆ 'ಮಸಿ' ಬಣ್ಣದ ಮರ.

ಸುಮಾರು 15 ಮೀಟರ್ ಎತ್ತರದವರೆಗೆ 'ಮಸಿವಾಳ' ಮರ ಬೆಳೆಯುತ್ತದೆ. ಅದರ ತೊಗಟೆ ಕಪ್ಪು ಬಣ್ಣದ್ದಾಗಿದ್ದು, ಕಾರ್ಕ್‌ನಂತೆ ದಪ್ಪವಾಗಿರುತ್ತದೆ. ಹಲವಾರು ಬಿರುಕುಗಳನ್ನು ಹೊಂದಿರುವ ಕರಿ ತೊಗಟೆ, ಬೆಣ್ಣೆಯಂತೆ ಮೃದುವಾಗಿರುತ್ತದೆ. ಮುಟ್ಟಿದರೆ ಕಾಡಿಗೆಯಂತಹ ಕಪ್ಪುಹುಡಿ ಕೈಗೆ ಮೆತ್ತಿಕೊಳ್ಳುತ್ತದೆ.

ಬೇಟೆಯಾಡಲು ಕಾಡಿಗೆ ಹೋಗುವ ಜನರು ಮಸಿವಾಳ ಮರದ ಮಸಿಯನ್ನು ತಮ್ಮ ಮುಖದ ಮೇಲೆ ಚಿತ್ರ ವಿಚಿತ್ರವಾಗಿ ಬಳಿದುಕೊಳ್ಳುತ್ತಾರೆ. ಯಾವುದಾದರೂ ಕಾಡುಪ್ರಾಣಿ ಎದುರಾದಲ್ಲಿ, ಅದರ ಆಕ್ರಮಣದಿಂದ ಪಾರಾಗಲು ಮುಖದ ಮೇಲೆ ಚಿತ್ತಾರ ಬಿಡಿಸಿಕೊಳ್ಳುತ್ತಾರಂತೆ.

ದಕ್ಷಿಣ ಭಾರತ ಮೂಲದ 'ಮಸಿವಾಳ' ಮರವನ್ನು ಇಂಗ್ಲಿಷ್‌ನಲ್ಲಿ 'ಈಸ್ಟ್ ಇಂಡಿಯನ್ ಸ್ಯಾಟಿನ್ ವುಡ್' ಎಂದು ಕರೆಯುತ್ತಾರೆ.

ಸಾಮಾನ್ಯವಾಗಿ ಗುಡ್ಡಗಳ ಇಳಿಜಾರಿನಲ್ಲಿ ಮಸಿವಾಳ ಬೆಳೆಯುತ್ತದೆ. ಮಸಿಯಷ್ಟೇ ಮಸಿವಾಳದ ವಿಶೇಷವಲ್ಲ. ಪೀಠೋಪಕರಣ, ಕ್ಯಾಬಿನೆಟ್, ಫ್ಲೋರಿಂಗ್, ಬಾಕ್ಸ್, ಕ್ರೇಟ್ಸ್ ಮೊದಲಾದವುಗಳನ್ನು ತಯಾರಿಸಲು ಈ ಮರವನ್ನು ಉಪಯೋಗಿಸುತ್ತಾರೆ. ಆಯುರ್ವೇದದಲ್ಲಿ ಕೂಡ ಮಸಿವಾಳ ಮಹತ್ವದ ಸ್ಥಾನ ಪಡೆದಿದೆ. ಗಾಯಗಳನ್ನು ಗುಣಪಡಿಸಲು ಹಾಗೂ ಸಂಧಿವಾತ ಚಿಕಿತ್ಸೆಯಲ್ಲಿ ಮಸಿವಾಳ ಬಳಕೆಯಾಗುತ್ತದೆ. ಈ ಮರದ ಎಲೆಗಳನ್ನು ಹಾಗೂ ಬೇರಿನ ತೊಗಟೆಯನ್ನು ನಪುಂಸಕತ್ವ ಹೋಗಲಾಡಿಸುವ ಔಷಧಿಯಲ್ಲಿ ಬಳಸುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in